## ಅ.7ರಂದು ನವಲಗುಂದ ಬಂದ್‌ಗೆ ಕರೆ

**ನವಲಗುಂದ:** ಮಹಾದಾಯಿ ನೀರಿನ ಹಕ್ಕು, ಕಳಸಾ–ಬಂಡೂರಿ ಯೋಜನೆ ಅನುಷ್ಠಾನ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಹಾದಾಯಿ, ಕಳಸಾ–ಬಂಡೂರಿ ಜಾತ್ಯತೀತ ಹಾಗೂ ಪಕ್ಷಾತೀತ ರೈತ ಹೋರಾಟ ಒಕ್ಕೂಟದ ನೇತೃತ್ವದಲ್ಲಿ ಅ.7ರಂದು ನವಲಗುಂದ ಬಂದ್‌ಗೆ ಕರೆ ನೀಡಲಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ಒಕ್ಕೂಟದ ಅಧ್ಯಕ್ಷ ಲೋಕನಾಥ ಹೆಬಸೂರ, ಸಮಗ್ರ ಕರ್ನಾಟಕ ರಾಜ್ಯ ರೈತ ಸಂಘಟನೆಗಳು ಹಾಗೂ ಜೆನ್–ಜಿ ಯುವ ರೈತ ಮಿತ್ರರ ಸಹಯೋಗದಲ್ಲಿ ಅಂದು ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ. ಉತ್ತರ ಕರ್ನಾಟಕದ ರೈತರ ಪ್ರಮುಖ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಬಂದ್‌ಗೆ ಕರೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಹೋರಾಟಕ್ಕೆ ಪಟ್ಟಣದ ವ್ಯಾಪಾರಸ್ಥರು, ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರು ಸಂಪೂರ್ಣ ಬೆಂಬಲ ನೀಡಬೇಕು. ರೈತರ ಹಕ್ಕುಗಳಿಗಾಗಿ ನಡೆಯುವ ಈ ಹೋರಾಟದಲ್ಲಿ ರೈತರು, ಯುವಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಬಂದ್‌ನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.


ಜಿ.ಆ್ಯಂಡ ಡಬ್ಲ್ಯೂ ನಂ. 189/2026

**ಮಾನ್ಯ ಪ್ರಧಾನ 1ನೇ ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ**

ಅರ್ಜಿದಾರರು : **1) ನಾಜಿಮಾ ಕೋಂ ಅಕ್ಬರ ಉರ್ಫ ಅಕ್ಬರ ಬಾಷಾ ಧಾರವಾಡ ಹಾಗೂ ಇನ್ನೊಬ್ಬರು.**

**ವಿರುದ್ಧ**

ಎದುರುದಾರರು : ಯಾರೂ ಇಲ್ಲಾ.

**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 (ಎ-1) (ಎ) ರ ಅಡಿಯಲ್ಲಿ ಅರ್ಜಿ ನೋಟೀಸು.**

ಇದರಲ್ಲಿ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರರು ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಪೈಕಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಭೈರಿದೇವರಕೊಪ್ಪದಲ್ಲಿರುವ ಬಿನ್ ಶೇಕ್ಸಿ ಪ್ಲಾಟ್ ಇದರ ಬ್ಲಾಕ್ ನಂ. 339ಬ+340ಬ ನೇದ್ದರಲ್ಲಿ ರಚಿಸಿದ ಪ್ಲಾಟುಗಳ ಪೈಕಿ **ಪ್ಲಾಟ್ ನಂ. 88, 89 ಹಾಗೂ 90**, ಇವುಗಳ ತಲಾ ಕ್ಷೇತ್ರ: 10.5 ಆಣೆ ಖುಲ್ಲಾ ಜಾಗೆ ಆಸ್ತಿಯ ಪೈಕಿ ಅರ್ಜಿದಾರರು ತಮ್ಮ ಪಾಲಿನ ಹಾಗೂ ಅರ್ಜಿದಾರ ನಂ. 2ನೇದವರ ಪಾಲಿನ 1/5 ಹಿಸ್ಸೆಯನ್ನು ಅಲ್ಪವಯಿ ಸಂರಕ್ಷಣದಾರ ನಾತೆಯಿಂದ ಮಾರಾಟ ಮಾಡಲು ಅರ್ಜಿದಾರ ನಂ. 1 ನೇದವರು ನೇಮಕಾತಿ ಕೋರಿ ಮೇಲ್ಕಂಡ ಪ್ರಕರಣವನ್ನು ಮಾನ್ಯ ನ್ಯಾಯಾಲಯಕ್ಕೆ ದಾಖಲ ಮಾಡಿದ್ದು ಇರುತ್ತದೆ.

ಮೇಲ್ಕಂಡ ಪ್ರಕರಣವನ್ನು ಮಾನ್ಯ ನ್ಯಾಯಾಲಯವು ಸುನಾವಣೆಗೆ ಅಂತಾ ದಿ: 26–10–2026 ರಂದು ಮುದ್ದತ್ತು ನೇಮಿಸಿದ್ದು, ಸದರಿ ಯಾರದಾದರೂ ತಂಟೆ ತಕರಾರು ವಗೈರೆ ಇದ್ದಲ್ಲಿ, ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ಇಲ್ಲದಿದ್ದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

ಈ ಹೊತ್ತು ದಿ: 05–10–2026 ರಂದು ನನ್ನ ಸಹಿ ಮತ್ತು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಕೊಡ ಮಾಡಲ್ಪಟ್ಟಿತು.

ಹುಬ್ಬಳ್ಳಿ, ದಿ:05–10–2026 (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ ಸಹಿ/- ಶಿರಸ್ತೇದಾರರು ಪ್ರಧಾನ ದಿವಾಣಿ ನ್ಯಾಯಾಲಯ (ಹಿ.ವಿ.) ಹುಬ್ಬಳ್ಳಿ

**(ಎಮ್.ಐ. ನದಾಫ)** ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ.



**ನೈರುತ್ಯ ರೈಲ್ವೆ**

**ಇ–ಟೆಂಡರ್ ಪ್ರಕಟಣೆ ಸಂ.: ಸಿಎಒ/ಸಿಎನ್/ಬಿಎನ್‌ಸಿ/200/2026 ದಿನಾಂಕ: 29.09.2026**

ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ನಮೂದಿಸಿರುವ ಕಾಮಗಾರಿಗೆ ಇ–ಟೆಂಡರ್ ಆಹ್ವಾನಿಸಿರುತ್ತಾರೆ

| ಕಾಮಗಾರಿ ವಿವರ | ಅಂದಾಜು ವೆಚ್ಚ |
|---|---|
| ನೈರುತ್ಯ ರೈಲ್ವೆ ನಿರ್ಮಾಣ ವಿಭಾಗದ ವ್ಯಾಪ್ತಿಯಲ್ಲಿನ ವಿವಿಧ ಯೋಜನೆಗಳಲ್ಲಿ, ವಲಯದ ಯಾವುದೇ ಸ್ಥಳದಲ್ಲಿ 20 ಆರ್‌ಪಿ ವರೆಗಿನ ಯಾವುದೇ ರೈಲು ವಿಭಾಗಕ್ಕೆ 'ಮೊಬೈಲ್ ಫ್ಲ್ಯಾಶ್ ಬಟ್ ವೆಲ್ಡಿಂಗ್' ಕಾರ್ಯವನ್ನು ಕೈಗೊಳ್ಳುವುದು. (ಟೆಂಡರ್ ಉಲ್ಲೇಖ ಸಂಖ್ಯೆ: FBW-SWR-CN-2026) | Rs. 16,64,06,323/- |

**ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.10.2026 ಸಮಯ: 15:00 ಗಂಟೆಯವರೆಗೆ.**

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಉಪ ಮುಖ್ಯ ಎಂಜಿನಿಯರ್/ನಿರ್ಮಾಣ ಕಾಮಗಾರಿಗಳು/ಬೆಂಗಳೂರು ಕಂಟೋನ್ಮೆಂಟ್

ಪಿಯಬಿ/518/ಎಎಸಿ/ಜಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRAILWAYHQ | @sw_railways



ಉತ್ತರ ಕರ್ನಾಟಕದ ನಂ. 1 ಬೋರವೆಲ್ ಕಂಪನಿ

ಶ್ರೀ ವೆಂಕಟೇಶ್ವರ ಬೋರವೆಲ್ಸ್

SRI VENKATESHWARA BOREWELLS

SINCE 1983

4½, 6", 6½ & 7" BOREWELLS

SUPER FAST RIGS

2000

99029 27516

94480 51338

HEAD OFFICE: U-53, LAXMI COMPLEX, NEELIGIN ROAD, HUBBALLI - 580 029.



**ಸಾರ್ವಜನಿಕ ನೋಟೀಸು**

ನಮ್ಮ ಪಕ್ಷಗಾರರಾದ **ಶ್ರೀಮತಿ ಪುಷ್ಪಾವತಿ ಕೋಂ. ರಾಘವೇಂದ್ರ ಅರಷಣಗಿ, ಸಾ॥ ಸಿದ್ದನಪೇಟ, ವೀರಾಪೂರ ಓಣಿ ರಸ್ತೆ, ಹುಬ್ಬಳ್ಳಿ**, ಇವರು ನಮಗೆ ಕೊಟ್ಟ ಮಾಹಿತಿ ಮತ್ತು ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ:

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಪೈಕಿ ಅಗಡಿ ಗ್ರಾಮದ ಹದ್ದಿನಲ್ಲಿರುವ ಶೇತ್ಕಿ ಜಮೀನು ಇದರ ಸರ್ವೆ ನಂ. 83*/2, ಕ್ಷೇತ್ರ 01–ಎಕರೆ 16–ಗುಂಟೆ ನೇದ್ದು **ಶ್ರೀ ಈರನಗೌಡ ತಂದೆ ಗುರನಗೌಡ ಹೊಸಮನಿ, ಸಾ॥ ಅಗಡಿ, ತಾಲೂಕ ಹುಬ್ಬಳ್ಳಿ** ಇವರ ಮಾಲ್ಕೀ ಕಬ್ಜಾವಹಿವಾಟವುಳ್ಳದ್ದು ಇರುತ್ತದೆ. ಸದರೀ ಆಸ್ತಿಯನ್ನು ನಮ್ಮ ಪಕ್ಷಗಾರರು ಸದರೀಯವರಿಂದ ಖರೀದಿಗೆ ತೆಗೆದುಕೊಳ್ಳಲು ಒಪ್ಪಿ, ತಮ್ಮ ಹೆಸರಿಗೆ ಖರೀದಿ ಪತ್ರವನ್ನು ನೋಂದ ಮಾಡಿಕೊಳ್ಳುವವರು ಇರುತ್ತಾರೆ.

ಆದುದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ, ನಮ್ಮ ಪಕ್ಷಗಾರರು ಖರೀದಿಗೆ ತೆಗೆದುಕೊಳ್ಳಲು ಒಪ್ಪಿರುವ ಮೇಲ್ಕಾಣಿಸಿದ ಆಸ್ತಿಯ ಕುರಿತು ಸಾರ್ವಜನಿಕರದು ಹಾಗೂ ಸದರ ಆಸ್ತಿಗೆ ಸಂಬಂಧಪಟ್ಟವರದು ಯಾರದಾದರೂ ತಂಟೆ, ತಕರಾರು, ಹಕ್ಕು ವ ಹಿತಾಸಕ್ತಿ, ಭೋಜಾ ವಗ್ಗೆರೆಗಳು ಇದ್ದಲ್ಲಿ, ಈ ನೋಟೀಸು ಪ್ರಕಟವಾದ ಏಳು (7) ದಿನಗಳ ಒಳಗಾಗಿ ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಲೇಖಿ ಮುಖಾಂತರ ತಿಳಿಸತಕ್ಕದ್ದು, ತಿಳಿಸದಿದ್ದಲ್ಲಿ ಸಾರ್ವಜನಿಕರದು ಯಾರದೂ, ತಂಟೆ, ತಕರಾರು, ಹಕ್ಕು ವ ಹಿತಾಸಕ್ತಿ ಭೋಜಾ ವಗ್ಗೆರೆ ಏನೂ ಇಲ್ಲ ಅಂತಾ ಗ್ರಹಿಸಿ, ಸದರಿ ಆಸ್ತಿಯ ಖರೀದಿ ಪತ್ರವನ್ನು ನಮ್ಮ ಪಕ್ಷಗಾರರು ತಮ್ಮ ಹೆಸರಿಗೆ ನೋಂದ ಮಾಡಿಕೊಳ್ಳುವವರು ಇರುತ್ತಾರೆ. ಖರೀದಿ ಪತ್ರವು ನೋಂದ ಆದ ನಂತರ ಬಂದ ಯಾವತ್ತೂ ತಂಟೆ ತಕರಾರುಗಳು ನಮ್ಮ ಪಕ್ಷಗಾರರು ಖರೀದಿಸಿದ ಆಸ್ತಿಯ ಮೇಲೆ ವ ನಮ್ಮ ಪಕ್ಷಗಾರರ ಮೇಲೆ ಯಾವುದೇ ರೀತಿಯಿಂದ ಬಾಂಧಾಯಿಸಲಾರವು ಅಂತಾ ಈ ಮೂಲಕ ಕೊಟ್ಟ ಸಾರ್ವಜನಿಕ ನೋಟೀಸು.

ಹುಬ್ಬಳ್ಳಿ 05–10–2026 **ಶಂಕರಗೌಡ ಎಸ್. ನಾಗನಗೌಡ್ರ ಹಾಗೂ ಜೆ.ಬಿ. ಪಾಟೀಲ**, ವಕೀಲರು, ದಿವಟೆ ಕಾಂಪ್ಲೆಕ್ಸ್, ಕ್ಲಬ್ ರಸ್ತೆ, ಹುಬ್ಬಳ್ಳಿ


ಎಐಗೆ ಸಿಬಿಲ್ ಸ್ಕೋರ್ | ಗೌತಮ್ ಪಾಟೀಲ, ಧೀರಜ್ ಎಸ್. ಸಾಧಕ ಯುವಕರು | ಎಐ ಏಜೆಂಟ್‌ಗಳ ಭದ್ರತೆಗೆ ಹುಬ್ಬಳ್ಳಿಯ 'ಬ್ಲ್ಯಾಕ್ ಬಾಕ್ಸ್

# ಹುಬ್ಬಳ್ಳಿಯ ಯುವಕನ 'ಟ್ರೂಸ್ಕೋರ್' ತಂತ್ರಜ್ಞಾನಕ್ಕೆ ಜಾಗತಿಕ ಗರಿ !

■ **ಶಿವಕುಮಾರ ಹಳ್ಯಾಳ**

**ಸಂ.ಕ.ಸಮಾಚಾರ, ಹುಬ್ಬಳ್ಳಿ:** ಕೃತಕ ಬುದ್ಧಿಮತ್ತೆ (ಎಐ) ಏಜೆಂಟ್‌ರ ಅಪಾಯ ಅಳೆಯಲು ಹುಬ್ಬಳ್ಳಿ ಯುವಕ ಅಭಿವೃದ್ಧಿಪಡಿಸಿದ ತಂತ್ರಜ್ಞಾನಕ್ಕೆ ಜಾಗತಿಕ ಮನ್ನಣೆ ಲಭಿಸಿದೆ.

ಬೆಂಗಳೂರಿನಲ್ಲಿರುವ ಬಿಟ್ಸ್ ಪಿಲಾನಿ ಕಂಪ್ಯೂಟರ್ ಸೈನ್ಸ್ ದ್ವಿತೀಯ ವರ್ಷದ ವಿದ್ಯಾರ್ಥಿ ಗೌತಮ್ ಆರ್. ಪಾಟೀಲ ಮತ್ತು ಐಐಟಿ ಮದ್ರಾಸ್ ವಿದ್ಯಾರ್ಥಿ ಧೀರಜ್ ಎಸ್. ಜಂಟಿಯಾಗಿ ಸ್ಥಾಪಿಸಿರುವ ಎಕ್ಸ್‌ಎಜಿಐ ಲ್ಯಾಬ್ಸ್ ಈ ಸಾಧನೆ ಮಾಡಿದೆ. ಇದರಲ್ಲಿ ಹುಬ್ಬಳ್ಳಿಯ 20ರ ಹರೆಯದ ಗೌತಮ್ ಪಾಟೀಲ ಸಾಧನೆ ಮಹತ್ವದ್ದಾಗಿದೆ.



ಗೌತಮ್ ಪಾಟೀಲ ಧೀರಜ್ ಎಸ್.

ಇವರ ಪ್ರಮುಖ ಉತ್ಪನ್ನ ಟ್ರೂಸ್ಕೋರ್. ಬ್ಯಾಂಕ್ ಸಾಲಕ್ಕೆ ಸಿಬಿಲ್ ಸ್ಕೋರ್ ಹೇಗೋ, ಹಾಗೆಯೇ ಎಐ ವ್ಯವಸ್ಥೆಯ ವಿಶ್ವಾಸಾರ್ಹತೆ ಅಳೆಯುವುದೇ ಟ್ರೂಸ್ಕೋರ್ ಕೆಲಸ. ಎಐ ಏಜೆಂಟ್‌ಗಳು ವೆಬ್‌ಸೈಟ್ ಬ್ರೌಸ್ ಮಾಡುವುದು, ಕೋಡ್ ಬರೆಯುವುದು, ಕಂಪನಿಯ ಸೂಕ್ಷ್ಮ ಮಾಹಿತಿ ನಿರ್ವಹಿಸುವುದು ಮಾಡುತ್ತಿವೆ. ಒಂದು ತಪ್ಪು ನಿರ್ಧಾರದಿಂದ ಭದ್ರತಾ ಲೋಪ, ಆರ್ಥಿಕ ನಷ್ಟ ಮತ್ತು ಕಾನೂನು ಸಮಸ್ಯೆ ಎದುರಾಗಬಹುದು.

> **ಸದ್ಯಕ್ಕೆ ನಾವು ಎಐಗೆ ಸಿಬಿಲ್ ಸ್ಕೋರ್ ಇದ್ದಂತೆ ಕೆಲಸ ಮಾಡುತ್ತಿದ್ದೇವೆ. ಭವಿಷ್ಯದಲ್ಲಿ ಎಐ ವ್ಯವಸ್ಥೆಗಳಿಗೆ ನೇರವಾಗಿ ವಿಮೆ ನೀಡುವ ಕಂಪನಿಯಾಗುವುದು ನಮ್ಮ ಗುರಿ**
> ■ **ಗೌತಮ್ ಪಾಟೀಲ,**
> | ಪಿಯು ದ್ವಿತೀಯ ವರ್ಷದ ವಿದ್ಯಾರ್ಥಿ.

ಈ ಅಪಾಯಕ್ಕೆ ಸ್ವತಂತ್ರ ಸಾಕ್ಷ್ಯ ನೀಡಲು ಟ್ರೂಸ್ಕೋರ್ ನೆರವಾಗುತ್ತದೆ ಎಂಬುದು ಈ ಯುವಕರು ನೀಡುವ ವಿವರಣೆ.

### ಹೇಗೆ ಕೆಲಸ ಮಾಡುತ್ತದೆ?

ಟ್ರೂಸ್ಕೋರ್‌ನ ಸೋವಾ ಇಂಜಿನ್ ಎಐ ಏಜೆಂಟ್‌ಗಳನ್ನು ಅಡ್ವರ್ಸರಿಯಲ್ ಟೆಸ್ಟಿಂಗ್ ಮೂಲಕ ಪರೀಕ್ಷಿಸಿ, ಭದ್ರತಾ ಲೋಪಗಳನ್ನು ದಾಖಲಿಸುತ್ತದೆ. ಗೌತಮ್ ರೂಪಿಸಿದ ಸೋವಾ ಟ್ರೇಸ್ ತಂತ್ರಜ್ಞಾನವು ವಿಮಾನದ ಬ್ಲ್ಯಾಕ್ ಬಾಕ್ಸ್‌ನಂತೆ ಎಐನ ಪ್ರತಿ ಚಟುವಟಿಕೆ ಸಂರಕ್ಷಿಸುತ್ತದೆ. ನಂತರ ಎಐನ ಪ್ರವೇಶ, ಅನುಮತಿ ಮತ್ತು ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

### ಸಾಧನೆ ಏನು?

ಕೆಲವೇ ತಿಂಗಳಲ್ಲಿ 2 ಓಪನ್ ಸೋರ್ಸ್ ರೆಪೊಸಿಟರಿ, 5 ಪೈಲಟ್ ಯೋಜನೆ ಪೂರ್ಣ. 91.2% ದೀರ್ಘಾವಧಿ ಸ್ಮರಣೆ ನಿಖರತೆ, 94.4% ಸಾಕ್ಷ್ಯ ವ್ಯಾಪ್ತಿ ಮತ್ತು 4.6 ಮಿಲಿ ಸೆಕೆಂಡ್ ರೀಕಾಲ್ ವೇಗ ಸಾಧಿಸಿದೆ. 1 ಮಿಲಿಯನ್ ಡಾಲರ್‌ಗೂ ಅಧಿಕ ಮೌಲ್ಯದ ಕ್ಲೌಡ್–ಎಐ ಸೌಲಭ್ಯ ಪಡೆದಿದ್ದು, ವೈಎನ್‌ಓಎಸ್ ಗ್ಲಾಡಿಯೇಟರ್ ಟಾಪ್ 10 ಮತ್ತು ಎಚ್‌ವೈಕೆಆರ್ ಬಿಲ್ಡ್ ಚಾಲೆಂಜ್ ಟಾಪ್ 30ರಲ್ಲಿ ಸ್ಥಾನ ಪಡೆದಿದೆ.

ಕೇಂದ್ರದ ಇನ್ಸ್ಪೈರ್ ಪ್ರಶಸ್ತಿ ಪುರಸ್ಕೃತ ಗೌತಮ್, ಟ್ರೂಸ್ಕೋರ್ ಮತ್ತು ಸೋವಾ ವಿಭಾಗದ ನೇತೃತ್ವ ವಹಿಸಿದ್ದರೆ, ಧೀರಜ್ ಎಂಎಲ್‌ಆರ್‌ಎ ರಚನೆ ಮುನ್ನಡೆಸುತ್ತಿದ್ದಾನೆ.

## ಕಾಮಗಾರಿ ವಿಳಂಬ; ಪ್ರತಿಭಟನೆ

**ಹುಬ್ಬಳ್ಳಿ:** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಡಾ.ಬಿ.ಆರ್. ಅಂಬೇಡ್ಕರ್ ಸಾಂಸ್ಕೃತಿಕ ಸಮುದಾಯ ಭವನ ನಿರ್ಮಾಣ ಹಾಗೂ ಪಾಲಿಕೆ ಅಧಿಕಾರಿಗಳ ಕರ್ತವ್ಯಲೋಪ, ನಿಯಮ ಉಲ್ಲಂಘನೆ, ಕಾಮಗಾರಿ ವಿಳಂಬದ ಕುರಿತು ಕ್ರಮ ಕೈಗೊಳ್ಳುವಂತೆ ಸಿದ್ಧಾರ್ಥ ಸೇವಾ ಸಂಘದಿಂದ ಪ್ರತಿಭಟನೆ ನಡೆಸಲಾಯಿತು. ಸೋಮವಾರ ಪಾಲಿಕೆ ಆಯುಕ್ತರಿಗೆ ಕೂಡಲೇ ಕಾಮಗಾರಿ ಆರಂಭಿಸುವಂತೆ ಒತ್ತಾಯಿಸಿದರು.

**ಸಮುದಾಯ ಭವನ ಕಾಮಗಾರಿ ವಿಳಂಬದ ಕುರಿತು ಕ್ರಮ ಕೈಗೊಳ್ಳುವಂತೆ ಸಿದ್ಧಾರ್ಥ ಸೇವಾ ಸಂಘದಿಂದ ಪಾಲಿಕೆ ಎದುರು ಪ್ರತಿಭಟನೆ ನಡೆಸಲಾಯಿತು.**

ನೇತೃತ್ವವನ್ನು ಅಧ್ಯಕ್ಷ ವಿರೂಪಾಕ್ಷಿ ಚಲವಾದಿ, ಸುರೇಶ್ ಆರ್., ಕೆಂಚಪ್ಪ ಮಲ್ಲಮ್ಮನವರು, ಗುರುನಾಥ್ ಪಾಟೀಲ್, ಕೋಟೇಶ್ ಬುಳ್ಳಾಪುರ್, ಹುಬ್ಬಳ್ಳಿ ಶಹರ ಅಧ್ಯಕ್ಷ ಶ್ರೀಧರ್ ಕಂದಗಲ್, ರುದ್ರವ್ವ ಚಲವಾದಿ, ರೇಣವ್ವ ಕಾಳೆ, ಚನ್ನಬಸವ್ವ ಅಮರಾವತಿ, ಚೆನ್ನವ್ವ ಚಲವಾದಿ ಉಪಸ್ಥಿತರಿದ್ದರು


Original Suit No. 547 Of 2025

**In the court of the II Additional Senior Civil Judge Court and JMFC Hubli**

Mr. Ragavendragouda S/o Venkangouda Doddagoudar ..Plaintiff

Versus

Mr. Venkangouda S/o Chinnappagouda Doddagoudar and others ...Defendants

**Notice Under Order V Rule 20 (1-A) of cp c**

**Defendants 11 to 14, 16 and 18**

11. Mr. Nikhil S/o Ganesh Tanwade R/o: Nalavadi village, Ta: Annigeri, Dist: Dharwad
12. Mr. Sharanappa S/o Ganesh Tanwade R/o: Nalavadi village, Tq: Annigeri, Dist: Dharwad
13. Mr. Raju S/o Ganesh Tanwade R/o: Nalavadi village, Tq: Annigeri, Dist: Dharwad
14. Mr. Satish S/o Yellappa Balreddy R/o: Nalavadi village, Tq: Annigeri, Dist: Dharwad
16. Mrs. Shobha W/o Vijayraj Patil R/o: Saraf Gatti, Near Gantikeri Police Station, Hubli.
18. Mr. Vijayraj S/o Desaigouda Patil R/o: Saraf Gatti, Near Gantikeri Police Station, Hubli.

Whereas, the plaintiff has instituted the top noted suit as against the above referred defendants and other defendants for the relief of partition and separate possession and declaration in respect of the suit schedule properties which is now fixed on 29/10/2026 at 10.30 a. m for your appearance. You are hereby summoned to appear either personally or through your duly instructed advocate and file your Defense if any failing which the matter will be heard, decide and proceed further in accordance with law.

Given under my hand and seal of the court on this 25 day of September 2026

By order of the court. By Order of Court

Shankhar Havaldar Advocate

Sd/- Sheristedar II Additional Senior Civil Judge Court Hubli

**ಹುಬ್ಬಳ್ಳಿಯ ಕೆಎಲ್‌ಇ ಕಾಲೇಜ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನ ಬಿಬಿಎ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ವೃತ್ತಿ ಮಾರ್ಗದರ್ಶಕ ಹಾಗೂ ತರಬೇತುದಾರ ಮನೀಷ್ ಜೈನ್ ಮಾತನಾಡಿದರು.**

## ಕೆಲಸದ ವಿಧಾನ ಬದಲಿಸಿ... ಒತ್ತಡ ಮುಕ್ತರಾಗಿರಿ....

**ಹುಬ್ಬಳ್ಳಿ :** ಕೆಲಸದ ಒತ್ತಡ ಕಡಿಮೆ ಮಾಡಲು ಪ್ರತಿಬಾರಿಯೂ ಕೆಲಸದ ಪ್ರಮಾಣ ಕಡಿಮೆ ಮಾಡಬೇಕಿಲ್ಲ. ಕೆಲಸ ಮಾಡುವ ವಿಧಾನ ಬದಲಿಸಿಕೊಳ್ಳುವ ಮೂಲಕವೂ ಒತ್ತಡವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು ಎಂದು ವೃತ್ತಿ ಮಾರ್ಗದರ್ಶಕ ಹಾಗೂ ತರಬೇತುದಾರ ಮನೀಷ್ ಜೈನ್ ಹೇಳಿದರು.

ಕೆಎಲ್‌ಇ ಕಾಲೇಜ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನ ಬಿಬಿಎ ವಿದ್ಯಾರ್ಥಿಗಳಿಗಾಗಿ 'ಎಐ ಯುಗದಲ್ಲಿ ಕೆಲಸದ ಒತ್ತಡ ನಿರ್ವಹಣೆ ಹಾಗೂ ಬದಲಾಗುತ್ತಿರುವ ಕೆಲಸದ ಸಂಸ್ಕೃತಿಗೆ ಹೊಂದಿಕೊಳ್ಳುವುದು' ವಿಷಯದ ಕುರಿತು ಆಯೋಜಿಸಿದ್ದ ಸಂವಾದಾತ್ಮಕ ಕಾರ್ಯಾಗಾರದಲ್ಲಿ ಮಾತನಾಡಿದರು. ಮೊಬೈಲ್‌ನ ನಿರಂತರ ನೋಟಿಫಿಕೇಶನ್, ಹಲವು ಜವಾಬ್ದಾರಿಗಳು, ಸಮಯದ ಅಭಾವ, ಭವಿಷ್ಯದ ಚಿಂತೆ ಹಾಗೂ ತಂತ್ರಜ್ಞಾನದಲ್ಲಿನ ತ್ವರಿತ ಬದಲಾವಣೆಗಳು ಒತ್ತಡಕ್ಕೆ ಕಾರಣವಾಗುತ್ತಿವೆ. ಏಕಕಾಲದಲ್ಲಿ ಹಲವು ವಿಷಯಗಳ ಕುರಿತು ಯೋಚಿಸುವುದರಿಂದಲೂ ಮಾನಸಿಕ ಒತ್ತಡ ಹೆಚ್ಚುತ್ತದೆ. ಹೀಗಾಗಿ ಮನಸ್ಸಿನಲ್ಲಿರುವ ಕೆಲಸ ಹಾಗೂ ಚಿಂತೆಗಳನ್ನು ಬರೆದುಕೊಂಡು, ಯಾವುದನ್ನು ತಕ್ಷಣ ಮಾಡಬೇಕು, ಯಾವುದನ್ನು ಮುಂದೂಡಬಹುದು ಹಾಗೂ ಯಾವುದಕ್ಕೆ ಬೇರೆಯವರ ನೆರವು ಪಡೆಯಬಹುದು ಎಂಬುದನ್ನು ವಿಂಗಡಿಸಿಕೊಳ್ಳಬೇಕು ಎಂದರು.

ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

## ಸಿದ್ಧಿಯ ಬೆನ್ನು ಹತ್ತಿದರೆ ಪ್ರಸಿದ್ಧಿ ತಾನಾಗಿಯೇ ಬರುತ್ತೆ

**ಧಾರವಾಡ :** ಗಾಯನದಲ್ಲಿ ಸ್ವರಹಚ್ಚುವುದು ಬಹಳ ಪ್ರಾಮುಖ್ಯವಾಗುತ್ತದೆ. ಅತ್ಯುತ್ತಮ ಗುರುವಿನಿಂದ ಕಲಿಕೆಯಾದಾಗ ಮಾತ್ರ ಉತ್ತಮ ಸ್ವರ ಹಚ್ಚುವುದರ ಮೂಲಕ ಶ್ರೇಷ್ಠ ಗಾಯಕರಾಗಲು ಸಾಧ್ಯವಾಗುತ್ತದೆ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಿರಿಯ ಹಿಂದೂಸ್ತಾನಿ ಗಾಯಕ ಪಂ. ಎಂ. ವೆಂಕಟೇಶಕುಮಾರ ಹೇಳಿದರು.

**ಧಾರವಾಡ ಡಾ. ದ.ರಾ. ಬೇಂದ್ರೆ ಭವನದಲ್ಲಿ ನಡೆದ ರಿಯಾಜ್ ಮಂತ್ರ ಹಿಂದೂಸ್ತಾನಿಕ ಸಂಗೀತ ಕಾರ್ಯಾಗಾರವನ್ನು ಪಂ. ಎಂ. ವೆಂಕಟೇಶಕುಮಾರ ಉದ್ಘಾಟಿಸಿದರು.**

ಇಲ್ಲಿಯ ಡಾ.ದ.ರಾ. ಬೇಂದ್ರೆ ಭವನದಲ್ಲಿ ಕುಮಾರೇಶ್ವರ ಕಲ್ಚರಲ್ ಸೊಸೈಟಿ, ಇನ್ಫೋಸಿಸ್ ಫೌಂಡೇಶನ್, ಬೆಂಗಳೂರು ಹಾಗೂ ಇನ್ಫೋಸಿಸ್ ಲಿಂ. ಹುಬ್ಬಳ್ಳಿ ವತಿಯಿಂದ ರಿಯಾಜ್ ಮಂತ್ರ ಹಿಂದೂಸ್ತಾನಿ ಸಂಗೀತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಇಂದಿನ ಯುವ ಕಲಾವಿದರು ಕಾರ್ಯಕ್ರಮಗಳ ಬೆನ್ನು ಹತ್ತಬಾರದು, ಸಿದ್ಧಿಯ ಬೆನ್ನು ಹತ್ತಿದರೆ ಪ್ರಸಿದ್ಧಿ ತಾನಾಗಿಯೇ ಬರುತ್ತದೆ ಎಂದರು.

ಸಿದ್ಧಿ ಸಾಧನೆಯಾಗಬೇಕಾದರೆ ರಿಯಾಜ್ ಬಹಳ ಮುಖ್ಯ, ಶ್ರದ್ಧೆ, ಪರಿಶ್ರಮದಿಂದ ಸುಮಾರು ವರ್ಷಗಳ ರಿಯಾಜ ನಂತರ ಸಂಗೀತದ ಕಲಿಕೆಯಲ್ಲಿ ಪಕ್ವವಾಗಿ, ಪ್ರೌಢ ಗಾಯನ ಆರಂಭವಾಗುತ್ತದೆ. ಕೇವಲ ವಿದ್ಯೆ ಇದ್ದರೆ ಸಾಲದು, ಅದರಲ್ಲಿ ಕೌಶಲ್ಯಗಾರಿಗೆ, ತಂತ್ರಗಾರಿಕೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಇಂತಹ ಹಿಂದೂಸ್ತಾನಿ ಕಾರ್ಯಾಗಾರಗಳು ಪ್ರಮುಖವಾಗಿವೆಎಂದರು.

ಧಾರವಾಡ ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥ ಕುಮಾರ್ ಫಕೀರೇಶ್ ಅಗಡಿ ಮಾತನಾಡಿದರು.

ಕವಿವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪಂ. ಎಂ.ವೆಂಕಟೇಶಕುಮಾರ, ಶಂಕರ ಹಲಗತ್ತಿ, ಪಂ. ಬಾಲಚಂದ್ರ ನಾಕೋಡ, ಕುಮಾರ ಅಗಡಿ, ಮುಂಬಯಿಯ ಭಾಗ್ಯಶ್ರೀ ದೇಶಪಾಂಡೆ ಅವರನ್ನು ಸನ್ಮಾನಿಸಲಾಯಿತು.

ಖ್ಯಾತ ಗಾಯಕಿ ಭಾಗ್ಯಶ್ರೀ ದೇಶಪಾಂಡೆ ಅವರು ವಿವಿಧ ಆಯಾಮಗಳ ಗಾಯನ ತರಬೇತಿ ಹಾಗೂ ಸಂಗೀತ ಪ್ರಸ್ತುತಿಯ ಕುರಿತು ಒಳನೋಟ ಮತ್ತು ಸಮೃದ್ಧ ಅನುಭವವನ್ನು ನೀಡುವ ಸಂಗೀತ ಕಾರ್ಯಾಗಾರ ನಡೆಸಿಕೊಟ್ಟರು. "ಜಾಗ್ ಉಠೋ ನಂದಲಾಲಾ" ಎಂಬ ಬಂದಿಶ್‌ನ್ನು ಕಲಿಸಿಕೊಡುತ್ತ, ಅದರ ಸಂಗೀತದ ಸೂಕ್ಷ್ಮತೆಗಳು, ಭಾವ ಮತ್ತು ಪ್ರಸ್ತುತಿಯ ವಿವಿಧ ಆಯಾಮಗಳ ಕುರಿತು ಅಮೂಲ್ಯವಾದ ಮಾರ್ಗದರ್ಶನ ನೀಡಿದರು. ತಬಲಾದಲ್ಲಿ ವಾದಿರಾಜ ದಂಡಾಪೂರ, ಹಾರ್ಮೋನಿಯಂದಲ್ಲಿ ಬಸವರಾಜ ಹಿರೇಮಠ ಸಾಥ್ ನೀಡಿದರು.

ರವಿ ಕುಲಕರ್ಣಿ, ನಾಗರತ್ನಾ ಕುಂಬಾರ, ಪ್ರಕಾಶ ಬಾಳಿಕಾಯಿ, ಹಿರಿಯ ತಾಂತ್ರಿಕ ವ್ಯವಸ್ಥಾಪಕ ಶಿವಾನಂದ ಕೂಡ್ಲಮಠ, ರಾಘವೇಂದ್ರ ನಾಕೋಡ, ಮಲ್ಲಿಕಾರ್ಜುನ ಚಿಕ್ಕಮಠ, ಡಾ.ಮಹಾಂತೇಶ ಪಾಟೀಲ, ವಿದುಷಿ ಸುಜಾತಾ ಗುರವ, ವಿದುಷಿ ರೇಖಾ ಪಾಟೀಲ, ಸಂದೀಪ ನಾಯಕ, ಮಂಗಳಾ ಹಿರೇಮಠ, ಡಾ. ಗುರುಬಸವ ಮಹಾಮನೆ, ಶಕುಂತಲಾ ಹಾದಿಮನಿ ಸೇರಿದಂತೆ ಇತರರು ಇದ್ದರು.

ವಿಶ್ವ ಸೆರೆಬ್ರಲ್ ಪಾಲ್ಸಿ ದಿನ ಇಂದು | ಬಾಲ್ಯದ ರೋಗಕ್ಕೆ ಮದ್ದರೆದ ದರ್ಲಾ

## ಚಿಕಿತ್ಸೆಯ ಜೊತೆಗೆ ಆತ್ಮಸ್ಥೈರ್ಯವೂ ಮುಖ್ಯ

**ಸಂ.ಕ.ಸಮಾಚಾರ ಹುಬ್ಬಳ್ಳಿ**

ಇಂದು ವಿಶ್ವ ಸೆರೆಬ್ರಲ್ ಪಾಲ್ಸಿ ದಿನ. ಈ ಸೆಲೆಬ್ರಲ್ ಪಾಲ್ಸಿ ಬಗ್ಗೆ ಅನೇಕರಿಗೆ ಗೊತ್ತಿಲ್ಲ. ಸೆರೆಬ್ರಲ್ ಪಾಲ್ಸಿಯಿಂದ ಬಳಲುತ್ತಿರುವ ಜನರ ಜೀವನ ಮತ್ತು ಸಾಧನೆಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಲು ವಿಶ್ವ ಸೆರೆಬ್ರಲ್ ಪಾಲ್ಸಿ ದಿನ ಆಚರಿಸಲಾಗುತ್ತದೆ. ಹಾಗಾದರೆ ಇದನ್ನು ಏಕೆ ಆಚರಣೆ ಮಾಡಲಾಗುತ್ತೆ? ಇದರ ಇತಿಹಾಸವೇನು? ಹಾಗೂ ಇದರ ಬಗ್ಗೆ ಜಾಗೃತಿ ಏಕೆ ಮುಖ್ಯ ಎಂಬುದರ ಮಾಹಿತಿ ಇಲ್ಲಿದೆ.

ಪ್ರಪಂಚದಾದ್ಯಂತ ಸುಮಾರು 17 ಮಿಲಿಯನ್ ಜನರು ಸೆರೆಬ್ರಲ್ ಪಾಲ್ಸಿಯಿಂದ ಬಳಲುತ್ತಿದ್ದಾರೆ. ಈ ಅಂಶದ ಮೇಲೆ ಜಾಗೃತಿ ಮೂಡಿಸಲು ಮತ್ತು ಬೆಳಕು ಚೆಲ್ಲಲು ಪ್ರತಿ ವರ್ಷ ಅ.6ರಂದು ಸೆರೆಬ್ರಲ್ ಪಾಲ್ಸಿ ದಿನ ಆಚರಿಸಲಾಗುತ್ತದೆ. ಸೆರೆಬ್ರಲ್ ಪಾಲ್ಸಿ ಎನ್ನುವುದು ಚಲನೆ ಮತ್ತು ಭಂಗಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಅಸ್ವಸ್ಥತೆಗಳ ಒಂದು ಗುಂಪು. ಸರಿಯಾಗಿ ನಡೆಯಲಾಗದ, ಭಂಗಿಯಲ್ಲಿ ಕೂರಲಾಗದ, ಸರಿಯಾಗಿ ಗ್ರಹಿಸಲಾಗದ, ಸಂವೇದನೆ ಇಲ್ಲದ ಇದು ಭ್ರೂಣ ಅಥವಾ ಮಗುವಿನ ಮೆದುಳಿಗೆ ಹಾನಿಯಾಗುವುದರಿಂದ ಉಂಟಾಗುತ್ತದೆ. ಹಾಗಾಗಿ ಇದು ಹೆಚ್ಚಾಗಿ ಬಾಲ್ಯದಲ್ಲಿ ಕಂಡು ಬರುತ್ತದೆ.

> **ಸೆರೆಬ್ರಲ್ ಪಾಲ್ಸಿ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟರು. ಶಿರಸಿಯ ತಬಸ್ಸುಮ್ ಎಂಬ ಬಾಲಕಿಗೆ ಚಿಕಿತ್ಸೆ ನೀಡಿ ಯಶಸ್ಸು ಕಂಡಿದ್ದೇನೆ. ಇಂದು ತಬಸ್ಸುಮ್ ಉತ್ತಮವಾಗಿ ಚೇತರಿಸಿಕೊಂಡು ಹೊಸ ಜೀವನ ಆರಂಭಿಸಿದ್ದಾಳೆ. ವಿಶೇಷವಾಗಿ ಈ ತರಹದ ರೋಗಿಗಳಿಗೆ ಚಿಕಿತ್ಸೆಯ ಜೊತೆಗೆ ಅವರಲ್ಲಿ ಮನೋಧೈರ್ಯ ತುಂಬುವುದು ಬಹಳ ಮುಖ್ಯ.**
> ■ **ಡಾ. ಭಾಸ್ಕರರಾವ್ ದರ್ಲಾ,**
> | ಖ್ಯಾತ ಆರ್ಥೋಪೆಡಿಕ್ ಶಸ್ತ್ರ ಚಿಕಿತ್ಸಕ.

ಸೆರೆಬ್ರಲ್ ಪಾಲ್ಸಿ ಬಾಲ್ಯದಲ್ಲೇ ಆರಂಭವಾಗುವ ದೈಹಿಕ ಅಂಗವೈಕಲ್ಯಕ್ಕೆ ಕಾರಣವಾಗಬಹುದಾಗಿದೆ.

2026ರ ಅಭಿಯಾನದ ಮಾಹಿತಿಯ ಪ್ರಕಾರ ಜಾಗತಿಕವಾಗಿ ಸುಮಾರು 1.75 ಕೋಟಿ ರೋಗಿಗಳಿದ್ದಾರೆ. ಭಾರತದಲ್ಲಿ ಈ ಚಿಕಿತ್ಸೆ ಮತ್ತು ಸಂಶೋಧನೆ ನಡೆಯುತ್ತಲೇ ಇದೆ. ಆದರೆ, ಅದರಲ್ಲಿ ಯಶಸ್ಸು ಕಂಡವರು ಬಹಳ ವಿರಳ. ಆದರೆ, ಹುಬ್ಬಳ್ಳಿಯ ಖ್ಯಾತ ಆರ್ಥೋಪೆಡಿಕ್ ಶಸ್ತ್ರ ಚಿಕಿತ್ಸಕ ಡಾ.ಭಾಸ್ಕರರಾವ್ ದರ್ಲಾ ಅವರ ಚಿಕಿತ್ಸೆ ಹಾಗೂ ಸಂಶೋಧನಾ ಪ್ರಬಂಧಕ್ಕೆ 2015ರಲ್ಲಿ ಆಸ್ಕರ್ ಪ್ರಶಸ್ತಿಯೂ ಲಭಿಸಿದೆ.


**ಬ್ಯಾಂಕ್ ಆಫ್ ಬರೋಡ** / बैंक ऑफ़ बड़ौदा / Bank of Baroda

ಪ್ರಾದೇಶಿಕ ಕಛೇರಿ ಒತ್ತಡಕ್ಕೊಳಪಟ್ಟ ಸ್ವತ್ತುಗಳ ರಿಕವರಿ ಶಾಖೆ, ಹುಬ್ಬಳ್ಳಿ 2ನೇ ಮಹಡಿ, ಚಿಲ್ಲದ ಟವರ್ಸ್, ಬನ್ನಿಗಿಡ ಸ್ಟಾಪ್, ಗೋಕುಲ ರಸ್ತೆ, ಹುಬ್ಬಳ್ಳಿ–580030, ಕರ್ನಾಟಕ

ಇ–ಮೇಲ್: sarhub@bankofbaroda.com

**ಇ–ಹರಾಜು ಮಾರಾಟ ಸೂಚನೆ**

[ಅನುಬಂಧ–II ಎ ನಿಯಮ 6(2)ರೊಂದಿಗೆ ಚರಾಸ್ತಿಗಾಗಿ] [ಅನುಬಂಧ–IV–ಎ ಸ್ಥಿರಾಸ್ತಿಗಾಗಿ 8(6)ರ ನೊಬಂಧನೆಯನ್ನು ಉಲ್ಲೇಖಿಸಿ]

**2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ–ಹರಾಜು.**

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಭಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ–ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :–

| ಕ್ರ ಸಂ | ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು | ಚರಾಸ್ತಿ/ಸ್ಥಿರಾಸ್ತಿ ಯ ವಿವರ: (ಅಧಿಕೃತ ಅಧಿಕಾರಿಗಳ ತಿಳುವಳಿಕೆ ಮೇರೆಗೆ ಆಸ್ತಿಯ ಮೇಲೆ ಬೇರೆ ಯಾವುದೇ ಋಣಭಾರ | ಒಟ್ಟು ಬಾಕಿ ದಿ.04.10.2026 ರಂದು | ಇ-ಹರಾಜಿ ದಿನಾಂಕ ಸಮಯ: ಬಿಡ್ (ಹರಾಜು ಕೂಗುವ) ಸಮಯ | ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ) | ಆಸ್ತಿಯ ಸ್ವರೂಪ (ಸಾಂಕೇತಿಕ/ ಭೌತಿಕ) | ಆಸ್ತಿ ಪರಿಶಿಲನೆ ದಿನಾಂಕ ಮತ್ತು ಸಮಯ |
|---|---|---|---|---|---|---|---|
| 1 | ಶ್ರೀ ಪೂನಮಾರಾಮ್ ಬಿಷ್ಣೋಯಿ, ತಂದೆ: ಲಲಿತ್ ಲಾಲಾರಾಮ್, ಬಿ–ಬ್ಲಾಕ್ 306, ಶಿಂದೆ ಕಾಂಪ್ಲೆಕ್ಸ್, ನಿಲಿಜಿನ್ ರಸ್ತೆ, ಕಾಟನ್ ಮಾರ್ಕೆಟ್, ಹುಬ್ಬಳ್ಳಿ, ಧಾರವಾಡ ಜಿಲ್ಲೆ, ಕರ್ನಾಟಕ – 580021. ಆಸ್ತಿಯ ಜಿಪಿಎಸ್ ನಿರ್ದೇಶಾಂಕಗಳು: 15.3619 N 75.16073 E | ಷೆಡ್ಯೂಲ್ – ಎ ಹುಬ್ಬಳ್ಳಿ ತಾಲೂಕಿನ ಕೇಶವಾಪುರ ಗ್ರಾಮದ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ, ಸರ್ವೆ ನಂ. 31ಎ ರಲ್ಲಿನ ಕೃಷಿಯೇತರ ತೆರೆದ ಖಾಲಿ ಜಾಗದ ಪ್ಲಾಟ್ ನಂ. 44, 45 ಮತ್ತು 46 ಕ್ರಮವಾಗಿ ಎರಡು ಪ್ಲಾಟ್‌ಗಳು 00 ಗುಂಟೆ 15.25 ಆಣಾ, 00 ಗುಂಟೆ 15.25 ಆಣಾ, ಮತ್ತು 01 ಗುಂಟೆ 14.25 ಆಣಾ, (ಅಂದರೆ ಒಟ್ಟು 4135 ಚದುರ ಅಡಿ) ಗಳಲ್ಲಿನ ಕೇವಲ 6.76% (ಅಂದರೆ 280.00 ಚದುರ ಅಡಿ, 00 ಗುಂಟೆ 14.11 ಆಣಾ) ಅವಿಭಕ್ತ ಹಿಸ್ಸೆ ಜಾಗ ಮತ್ತು ಅದರ ಮೇಲಿನ ಹಕ್ಕು. ಇದರ ಚಕ್ಕುಬಂದಿ:ಪೂರ್ವಕ್ಕೆ : ಎಸ್.ಎನ್. 31/2 ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಪ್ಲಾಟ್ ನಂ 47 ದಕ್ಷಿಣಕ್ಕೆ : ರಸ್ತೆ ಷೆಡ್ಯೂಲ್ – ಬಿ ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿರುವ "ನವೀನ್ ಎಕೋಟಿಕಾ" ಅಪಾರ್ಟ್‌ಮೆಂಟ್ ಕಟ್ಟಡದ ಎರಡನೇ ಮಡಿಯಲ್ಲಿರುವ, 960 ಚದುರ ಅಡಿ ವಿಸ್ತೀರ್ಣದ, ಡಬಲ್ ಬೆಡ್‌ರೂಮ್ ಲಿವಿಂಗ್ ರೂಮ್, ಡೈನಿಂಗ್, ಯುಟಿಲಿಟಿ ಇತ್ಯಾದಿಗಳನ್ನು ಒಳಗೊಂಡಿರುವ ರೆಸಿಡೆನ್ಸಿಯಲ್ ಫ್ಲಾಟ್ ನಂ. SF-003 ರ ಎಲ್ಲಾ ಭಾಗ ಮತ್ತು ಅಂಶಗಳು. ಫ್ಲಾಟ್ ಮುನಿಸಿಪಲ್ ಇ–ಸ್ವತ್ತು ನಂ. 47–7–991–SF-003, ವಾರ್ಡ ನಂ. 47, ಹಳೆಯ ಸ್ವತ್ತು ನಂ. 47/5993, ನಿರ್ಧರಣಾ ನಂ. 31A/44/45/46/SF–003, ಪ್ಲಾಟ್ ನಂ. 47–5–885–105/A, ಎರಡನೇ ಮಹಡಿ, ಫ್ಲಾಟ್ ನಂ SF–003, ವಿಸ್ತೀರ್ಣ 89.21 ಚದುರ ಮೀಟರ್. (ಅಡಮಾನದಾರರು: ಪೂನಮಾರಾಮ್ ಬಿಷ್ಣೋಯಿ) | ರೂ. 41,45,361.90 (ರೂಪಾಯಿ ನಲವತ್ತೊಂದು ಲಕ್ಷ ನಲವತ್ತೈದು ಸಾವಿರದ ಮೂರು ನೂರುಅರವತ್ತೊಂದು ಮತ್ತು ತೊಂಬತ್ತು ಪೈಸೆ ಮಾತ್ರ) ಮತ್ತು ಅದರ ಮೇಲಿನ ಬಡ್ಡಿ ಹಾಗೂ ಖರ್ಚುಗಳು. | ಇ-ಹರಾಜಿನ ದಿನಾಂಕ: 28ನೇ ಅಕ್ಟೋಬರ್ 2026 ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ ಬಿಡ್ (ಹರಾಜು ಕೂಗುವ) ಸಮಯ: 28ನೇ ಅಕ್ಟೋಬರ್ 2026ರ ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ | 1.ರೂ.34,50,500.00 (ರೂಪಾಯಿ ಮೂವತ್ನಾಲ್ಕು ಲಕ್ಷ ಐವತ್ತು ಸಾವಿರದ ಐದು ನೂರು ಮಾತ್ರ) 2.ರೂ.3,45,050.00 (ರೂಪಾಯಿ ಮೂರು ಲಕ್ಷ ನಲವತ್ತೈದು ಸಾವಿರದ ಐವತ್ತು ಮಾತ್ರ) (ಇಎಂಡಿ ಠೇವಣಿಯನ್ನು 28ನೇ ಅಕ್ಟೋಬರ್ 2026 ರಂದು ಅಥವಾ ಅದಕ್ಕಿಂತ ಮೊದಲು ಸಾಯಂಕಾಲ 4.30 ಗಂಟರೊಳಗೆ ಜಮಾ ಮಾಡಬೇಕು) 3.ರೂ..25,000/– (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) | ಭೌತಿಕ ಸ್ವಾಧೀನ | 08.10.2026 ರಿಂದ 27.10.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ (ರಜಾದಿನಗಳನು ಹೊರತುಪಡಿಸಿ) |
| 2 | ಶ್ರೀಮತಿ ಹೀನಾ ಕೌಸರ್ ಪಠಾಣ್, ಪತಿ: ಇಮ್ರಾನ್ ಖಾನ್ ಪಠಾಣ್, ನಂ. 208, ಎಸ್. ಎಂ. ಕೃಷ್ಣ ನಗರ, ಹಳೆಯ ಹುಬ್ಬಳ್ಳಿ, ಧಾರವಾಡ ಜಿಲ್ಲೆ, ಕರ್ನಾಟಕ – 580024. ಆಸ್ತಿಯ ಜಿಪಿಎಸ್ ನಿರ್ದೇಶಾಂಕಗಳು: 15.323194, 75.154952 | ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಉಪ–ನೊಂದಣಿ ಮತ್ತು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಗಬ್ಬೂರು ಗ್ರಾಮದ "ಮೀನಾಜ್ ಲೇಔಟ್" ನಲ್ಲಿರುವ, ಆರ್.ಎಸ್.ನಂ. 163/1+2ಎ/1 ರಲ್ಲಿನ ಖುಲ್ಲ ಪ್ಲಾಟ್ ನಂ. 69. ಈ ಸ್ವತ್ತು 01 ಗುಂಟೆ 01.25 ಆಣೆ ಅಥವಾ 108 ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿದ್ದು, ಪಿ.ಐ.ಡಿ. ನಂ. 67/9542 ಮತ್ತು ಮುನಿಸಿಪಲ್ ನಂ.163/1+2ಎ/69 ರಲ್ಲಿ ಬರುತ್ತದೆ. ಅದರ ಚಕ್ಕುಬಂದಿ: ಪೂರ್ವಕ್ಕೆ:ಆರ್.ಎಸ್.ನಂ. 163/1+2ಬಿ, ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ಪ್ಲಾಟ್ ನಂ. 70, ದಕ್ಷಿಣಕ್ಕೆ: ಪ್ಲಾಟ್ ನಂ. 68 (ಅಡಮಾನದಾರರು: ಶ್ರೀಮತಿ ಹೀನಾ ಕೌಸರ್ ಪಠಾಣ್) | ರೂ. 26,52,374.05 (ರೂಪಾಯಿ ಇಪ್ಪತ್ತಾರು ಲಕ್ಷ ಐವತ್ತೆರಡು ಸಾವಿರದ ಮೂರು ನೂರು ಎಪ್ಪತ್ನಾಲ್ಕು ಮತ್ತು ಪೈಸೆ ಐದು ಮಾತ್ರ) ಮತ್ತು ಅದರ ಮೇಲಿನ ಬಡ್ಡಿ ಹಾಗೂ ಖರ್ಚುಗಳು. | ಇ-ಹರಾಜಿನ ದಿನಾಂಕ: 28ನೇ ಅಕ್ಟೋಬರ್ 2026 ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ ಬಿಡ್ (ಹರಾಜು ಕೂಗುವ) ಸಮಯ: 28ನೇ ಅಕ್ಟೋಬರ್ 2026ರ ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ | 1. ರೂ.16,39,100.00 (ರೂಪಾಯಿ ಹದಿನಾರು ಲಕ್ಷ ಮೂವತ್ತೊಂಬತ್ತು ಸಾವಿರದ ಒಂದು ನೂರು ಮಾತ್ರ) 2. ರೂ.1,63,910.00 (ರೂಪಾಯಿ ಒಂದು ಲಕ್ಷ ಮೂವತ್ತಾರು ಸಾವಿರದ ಒಂಬತ್ತು ನೂರು ಹತ್ತು ಮಾತ್ರ) (ಇಎಂಡಿ ಠೇವಣಿಯನ್ನು 28ನೇ ಅಕ್ಟೋಬರ್ 2026 ರಂದು ಅಥವಾ ಅದಕ್ಕಿಂತ ಮೊದಲು ಸಾಯಂಕಾಲ 4.30 ಗಂಟರೊಳಗೆ ಜಮಾ ಮಾಡಬೇಕು) 3. ರೂ.25,000/–( ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) | ಭೌತಿಕ ಸ್ವಾಧೀನ | 08.10.2026 ರಿಂದ 27.10.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ (ರಜಾದಿನಗಳನು ಹೊರತುಪಡಿಸಿ) |
| 3 | ಶ್ರೀ ಇಷಾ ಅಹ್ಮದ್ ದಲಾಲ್, ತಂದೆ ಶ್ರೀ ಮಹಮ್ಮದ್ ರಫೀಕ್ ದಲಾಲ್,ನೆಕಾರ್ ನಗರ ರಸ್ತೆ, ಬಿಲಾಲ್ ಮಸೀದಿ ಹಿಂಭಾಗ, ಟಿಪ್ಪು ನಗರ, ಹಳೇ ಹುಬ್ಬಳ್ಳಿ, ಕರ್ನಾಟಕ – 580024 ಜಿ.ಪಿ.ಎಸ್ ಅಕ್ಷಾಂಶಗಳು 15.339978 75.166829 | ಹುಬ್ಬಳ್ಳಿ ತಾಲೂಕಿನ ಮತ್ತು ಹುಬ್ಬಳ್ಳಿ ಉಪ ನಂದಣಿಕಾರರ ಜೋನ್, HDMC ಹುಬ್ಬಳ್ಳಿಯ ಅಧೀನಕ್ಕೆ ಬರುವ ಬೆವ್ಮಪೂರ ಗ್ರಾಮ, ಮುನಿಸಿಪಲ್ ವಾರ್ಡ್ ನಂ. 49 ರಲ್ಲಿ ಬರುವ, ಆರ್.ಎಸ್. ನಂ. 180ಎ/1ಡಿ ನಲ್ಲಿರುವ ಪ್ಲಾಟ್ ನಂ. 45, ಮುನಿಸಿಪಲ್ ನಂ. 180ಎ/1ಡಿ/45, PID ನಂ. 49/3405 ಮತ್ತು ಅದರ ಆಸ್ತಿ ನಂ. 49–2–528–NE–ಪ್ಲಾಟ್ ನಂ. 45 ರ ಅಳತೆ 00 ಗುಂಟೆ 08.50 ಆಣೇ ಅಂದರೆ 54 ಚದರ ಮೀಟರ್. ಚಕ್ಕುಬಂದಿ:ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ಪ್ಲಾಟ್ ನಂ 36 ಉತ್ತರಕ್ಕೆ : ಪ್ಲಾಟ್ ನಂ 44 ದಕ್ಷಿಣಕ್ಕೆ : ಪ್ಲಾಟ್ ನಂ 46 ಶ್ರೀ ಇಷಾ ಅಹ್ಮದ್ ದಲಾಲ್ ರವರಿಂದ ಅಡಮಾನ ಮಾಡಲಾಗಿದೆ. ಸ್ವತ್ತು ಸಾಂಕೇತಿಕ ವಶದಲ್ಲಿದೆ, ಮತ್ತು ಬ್ಯಾಂಕ್ ಸದರಿ ಸ್ವತ್ತಿನ ವಶವನ್ನು ಹರಾಜು ಖರೀದಿದಾರರಿಗೆ ಸಾಂಕೇತಿಕವಾಗಿ ಮಾತ್ರ ಹಸ್ತಾಂತರಿಸತಕ್ಕದ್ದು. | ರೂ.35,57,605.83 (ರೂಪಾಯಿ ಮೂವತ್ತೈದು ಲಕ್ಷ ಐವತ್ತೇಳು ಸಾವಿರದ ಆರು ನೂರು ಐದು ಮತ್ತು ಪೈಸೆ ಎಂಭತ್ತೂರು ಮಾತ್ರ) ಮತ್ತು ಅದರ ಮೇಲಿನ ಬಡ್ಡಿ ಹಾಗೂ ಖರ್ಚುಗಳು. | ಇ-ಹರಾಜಿನ ದಿನಾಂಕ: 12ನೇ ನವೆಂಬರ್ 2026 ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ ಬಿಡ್ (ಹರಾಜು ಕೂಗುವ) ಸಮಯ: 12ನೇ ನವೆಂಬರ್ 2026ರ ಬೆಳಿಗ್ಗೆ 10:00 ರಿಂದ ಸಂಜೆ 05:00 ಗಂಟೆಯವರೆಗೆ | 1.ರೂ.18,51,300.00 (ರೂಪಾಯಿ ಹದಿನೆಂಟು ಲಕ್ಷ ಐವತ್ತೊಂದು ಸಾವಿರದ ಮೂರು ನೂರು ಮಾತ್ರ) 2. ರೂ.1,85,130.00 (ರೂಪಾಯಿ ಒಂದು ಲಕ್ಷ ಎಂಭತ್ತೈದು ಸಾವಿರದ ಒಂದು ನೂರು ಮೂವತ್ತು ಮಾತ್ರ) (ಇಎಂಡಿ ಠೇವಣಿಯನ್ನು 12ನೇ ನವೆಂಬರ್ 2026 ರಂದು ಅಥವಾ ಅದಕ್ಕಿಂತ ಮೊದಲು ಸಾಯಂಕಾಲ 4:30 ಗಂಟರೊಳಗೆ ಜಮಾ ಮಾಡಬೇಕು) 3.ರೂ.25,000/– (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) | ಸಾಂಕೇತಿಕ ಸ್ವಾಧೀನ | 12.10.2026 ರಿಂದ 11.11.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ (ರಜಾದಿನಗಳನು ಹೊರತುಪಡಿಸಿ) |

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction ಹಾಗೂ baankent.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ **9482397247**ಗೂ ಸಹ ಕರೆ ಮಾಡಬಹುದು.

ದಿನಾಂಕ:05.10.2026, ಸ್ಥಳ:ಹುಬ್ಬಳ್ಳಿ ಸಹಿ/–ಮುಖ್ಯ ವ್ಯವಸ್ಥಾಪಕರು & ಅಧಿಕೃತ ಅಧಿಕಾರಿ ಬ್ಯಾಂಕ್ ಆಫ್ ಬರೋಡ


# ರೈತರಿಗೆ ಸೂಕ್ತ ಪರಿಹಾರ ನೀಡಲು ಆಗ್ರಹ

**ಸಂ.ಕ.ಸಮಾಚಾರ ನವಲಗುಂದ:**

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಭಿವೃದ್ಧಿ ಕಾಮಗಾರಿಗಳಿಗೆ ಹಿನ್ನಡೆಯಾಗಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳಿಗೂ ಹಣ ಪಾವತಿಯಾಗುತ್ತಿಲ್ಲ. ಐದು ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ವಿವಿಧ ಇಲಾಖೆಗಳ ಅನುದಾನ ಕಡಿತಗೊಳಿಸಿ, ಹೆಚ್ಚುವರಿ ಸಾಲ ಮಾಡುವ ಮೂಲಕ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಡಿಸಲಾಗಿದೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಗಂಗಪ್ಪ ಮನಮಿ ಆರೋಪಿಸಿದರು.

ಸೋಮವಾರ ಬಿಜೆಪಿ ನವಲಗುಂದ ಮಂಡಲದ ವತಿಯಿಂದ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಬರಗಾಲ ಸಂದರ್ಭದಲ್ಲಿ ರೈತರಿಗೆ ಹೆಚ್ಚಿನ ಪರಿಹಾರ ನೀಡುವಂತೆ ಆಗ್ರಹಿಸಿ ಮನವಿ ಸಲ್ಲಿಸಿ ಮಾತನಾಡಿದರು.

ಷಣ್ಮುಖಪ್ಪ ಗುರಿಕಾರ ಮಾತನಾಡಿ, ಭೀಕರ ಬರಗಾಲದ ನಡುವೆಯೂ ಸರ್ಕಾರ ಯಾವುದೇ ಬರಗಾಲ ಪರಿಹಾರ ಕಾಮಗಾರಿ ಆರಂಭಿಸದೆ ರೈತರೊಂದಿಗೆ ಚೆಲ್ಲಾಟವಾಡುತ್ತಿದೆ. 15 ದಿನಗಳೊಳಗಾಗಿ ರೈತರ ಖಾತೆಗಳಿಗೆ ಪರಿಹಾರದ ಹಣ ಜಮಾ ಮಾಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಮುಖಂಡ ಎ.ಬಿ. ಹಿರೇಮಠ ಮಾತನಾಡಿದರು. ಜಿ.ಎಂ. ಸಂಕನಗೌಡ್ರ, ಅಡಿವೆಪ್ಪ ಮನಮಿ, ಎನ್.ಪಿ. ಕುಲಕರ್ಣಿ, ಸಿದ್ದನಗೌಡ ಪಾಟೀಲ, ಸುರೇಶ ಗಾಣಿಗೇರ, ದೇವರಾಜ ದಾಡಿಬಾವಿ, ಶಾಂತಾದೇವಿ ನಿಡವಣಿ, ಸಾಯಿಬಾಬಾ ಆನೇಗುಂದಿ, ಮಲ್ಲಿಕಾರ್ಜುನಗೌಡ ಸಂಗನಗೌಡ್ರ, ಷಣ್ಮುಖ ಇಂಡಿ, ಅರುಣಕುಮಾರ ಮೆಣಸಿನಕಾಯಿ, ನಿಂಗಯ್ಯ ಬಣ್ಣದೂಲಮಠ, ದುರ್ಗಪ್ಪ ನಾಗಣ್ಣವರ, ಆನಂದ ಚವಡಿ, ಯಲ್ಲಪ್ಪ ಮಾಡೋಳ್ಳಿ, ನಾಗಪ್ಪ ಹರ್ತಿ, ಗುರಪ್ಪ ಅವರಾದಿ, ಬಸವರಾಜ ಕಾತರಕಿ, ಫಕ್ಕೀರಪ್ಪ ಜಕ್ಕಣ್ಣವರ, ಈರಣ್ಣ ಚವಡಿ, ಮಹಾಂತೇಶ ಕಲಾಲ, ಪ್ರಭು ಇಬ್ರಾಹಿಂಪುರ, ಪವನ ಪಾಟೀಲ, ಶ್ರೀಧರ ಪಟ್ಟಣಶೆಟ್ಟಿ, ಮಂಜುನಾಥ ಇಮ್ಮಡಿ ಇತರರು ಇದ್ದರು.

**ಬರಗಾಲದ ಸಂದರ್ಭದಲ್ಲಿ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ನವಲಗುಂದ ಬಿಜೆಪಿ ಮಂಡಲ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.**


**ದಿ ವಿಜಯನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ., ವಿಜಯನಗರ, ಹುಬ್ಬಳ್ಳಿ.**

ತಾ|| ಹುಬ್ಬಳ್ಳಿ ಜಿ|| ಧಾರವಾಡ

**ಪತ್ರಿಕಾ ಪ್ರಕಟಣೆ**

ಈ ಸಹಕಾರ ಸಂಘದ ಸನ್-2026ರ ಚುನಾವಣಾ ದಿನಾಂಕದಿಂದ ಮುಂದಿನ ಐದು (05) ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಯ ಸಾಮಾನ್ಯ ಚುನಾವಣೆಗೆ ಸಂಬಂಧಿಸಿ ಚುನಾವಣಾ ವೇಳಾಪಟ್ಟಿಯು. ಸದರ ಚುನಾವಣೆಯನ್ನು ಸದರಿ ಸಂಘದ ಕಲ್ಯಾಣ ಮಂಟಪ ಆವರಣದ ಕಟ್ಟಡದಲ್ಲಿ ವಿಜಯನಗರ, ಹುಬ್ಬಳ್ಳಿ ಇಲ್ಲಿ ಜರುಗಿಸಲಾಗುತ್ತದೆ.

| | | |
|---|---|---|
| 1) | ನಾಮಪತ್ರ ಸಲ್ಲಿಕೆಗೆ ಪ್ರಾರಂಭದ ಹಾಗೂ ಕೊನೆಯ ದಿನಾಂಕ | ದಿನಾಂಕ 10/10/2026 ರಿಂದ 17/10/2026ವರೆಗೆ ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ. |
| 2) | ನಾಮಪತ್ರಗಳ ಪರಿಶೀಲನೆ: | ದಿನಾಂಕ: 18/10/2026 ರಂದು ಬೆಳಿಗ್ಗೆ 11:00 ಗಂಟೆಗೆ |
| 3) | ನಾಮಪತ್ರಗಳ ವಾಪಸ್ಸಾತಿ/ಹಿಂದಕ್ಕೆ ಪಡೆಯುವ ದಿನಾಂಕ | ದಿನಾಂಕ: 19/10/2026ರ ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ |
| 4) | ಚುನಾವಣೆಯ ಮತದಾನ ದಿನಾಂಕ | ದಿನಾಂಕ: 25/10/2026 ರವಿವಾರರಂದು ಬೆಳಿಗ್ಗೆ 9:00 ಗಂಟೆಯಿಂದ ಸಾಯಂಕಾಲ 4:00 ಗಂಟೆಯವರೆಗೆ. |
| 5) | ಮತದಾನವಾದ ಮತಪತ್ರಗಳ ಎಣಿಕೆ | ಸಾಯಂಕಾಲ ಮತದಾನದ ಮುಕ್ತಾಯದ ನಂತರ |
| 6) | ಫಲಿತಾಂಶ ಘೋಷಣೆ | ಸಾಯಂಕಾಲ ಮತಪತ್ರಗಳ ಎಣಿಕೆ ಮುಕ್ತಾಯದ ನಂತರ |

ಹೆಚ್ಚಿನ ಅವಶ್ಯಕ ಮಾಹಿತಿಯನ್ನು ಸದರ ಸಂಘದ ಮುಖ್ಯಕಾರ್ಯನಿರ್ವಾಹಕರಿಂದ/ ಆಡಳಿತಾಧಿಕಾರಿಯವರಿಂದ ಪಡೆಯಬಹುದು.

ದಿನಾಂಕ: 03-10-2026 ಸ್ಥಳ: ಹುಬ್ಬಳ್ಳಿ

ಸಹಿ/- **(ಗೋಪಾಲ. ಎನ್ ತೆಲಗರ)** ರಿಟರ್ನಿಂಗ್ ಅಧಿಕಾರಿ ದಿ ವಿಜಯನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ., ವಿಜಯನಗರ, ಹುಬ್ಬಳ್ಳಿ, ತಾ|| ಹುಬ್ಬಳ್ಳಿ, ಜಿ|| ಧಾರವಾಡ ಹಾಗೂ ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಧಾರವಾಡ ಉಪವಿಭಾಗ, ಧಾರವಾಡ.